ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೦೯, ಮಾರ್ಚ್, ೨೦೨೧ (ಫಾಲ್ಗುಣ, ೧೮, ಶಕವರ್ಷ, ೧೯೪೨)<br>BENGALURU, TUESDAY, 09, MARCH, 2021 (PHALGUNA , 18, SHAKAVARSHA, 1942) | ನಂ. ೨೩೭<br>No. 237 |
|---|---|---|


**KARNATAKA LEGISLATIVE ASSEMBLY**

**FIFTEENTH LEGISLATIVE ASSEMBLY**

**NINTH SESSION**

**(Adjourned Meeting)**

# THE KARNATAKA MUNICIPALITIES (AMENDMENT) BILL, 2021

## (LA Bill No. 12 of 2021)

A Bill further to amend the Karnataka Municipalities Act, 1964.

Whereas it is expedient further to amend the Karnataka Municipalities Act, 1964 (Karnataka Act 22 of 1964) for the purposes hereinafter appearing;

Be it enacted by the Karnataka State Legislature in the seventy second year of the Republic of India as follows, namely:-

**1. Short title and commencement.–** (1) This Act may be called the Karnataka Municipalities (Amendment) Act, 2021.

(2) It shall come into force at once.

**2. Substitution of section 245**.- In the Karnataka Municipalities Act, 1964 (Karnataka Act 22 of 1964), for section 245, the following shall be substituted, namely:-

**"245. Power to expel disturbers etc., from markets.-** The person in charge of a market shall prevent the entry therein of and shall expel therefrom, any person

suffering from any dangerous or contagious disease, who sells or exposes for sale therein any article or who, not having purchased the same handles any article exposed for sale therein; and he may expel therefrom any person who is creating a disturbance therein."

## STATEMENT OF OBJECTS AND REASONS

It is considered necessary to amend the Karnataka Municipalities Act, 1964 (Karnataka Act 22 of 1964) to remove the discrimination against the persons who are suffering from leprosy, as it is a curable disease in conformity with the direction of Honourable Supreme Court of India in Writ petition Civil No. 1151/2017 (PIL-W).

Hence, the Bill.

## FINANCIAL MEMORANDUM

There is no extra-expenditure involved in the proposed legislative measure.

**N. NAGARAJA**
Minister for Municipal Administration

**M.K. VISHALAKSHI**
Secretary (I/c)
Karnataka Legislative Assembly

**ANNEXURE**

**THE EXTRACT FROM THE KARNATAKA MUNICIPALITIES ACT, 1964 (KARNATAKA ACT 22 OF 1964)**

**X X XX XX**

**245. Power to expel lepers and disturbers, etc., from markets.-** The person in charge of a market shall prevent the entry therein of and shall expel therefrom, any person suffering from leprosy in whom the process of ulceration has commenced, or from any dangerous disease, who sells or exposes for sale therein any article or who, not having purchased the same handles any article exposed for sale therein; and he may expel therefrom any person who is creating a disturbance therein.

**X X XX XX**

**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಒಂಭತ್ತನೇ ಅಧಿವೇಶನ**
**(ಮುಂದುವರೆದ ಉಪವೇಶನ)**

**ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ, 2021**
**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ–12)**

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 245ನೇ ಪ್ರಕರಣದ ಪ್ರತಿಯೋಜನೆ.-** ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 22) 245ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

``**245. ಗಲಭೆಕೋರರು ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಲು ಅಧಿಕಾರ.-** ಮಾರುಕಟ್ಟೆಯಲ್ಲಿ ಯಾವುದೇ ವಸ್ತುವನ್ನು ಮಾರುವ ಅಥವಾ ಮಾರಾಟಕ್ಕೆ ತೆರೆದಿಟ್ಟಿರುವ ಅಥವಾ ಅದರಲ್ಲಿ ಮಾರಾಟಕ್ಕಾಗಿ ಇಟ್ಟಿರುವ ಯಾವುದೇ ವಸ್ತುವನ್ನು ಕೊಂಡಿರದೇ ಅದನ್ನು ಮುಟ್ಟಿ ನೋಡುವ, ಯಾವುದೇ ಅಪಾಯಕಾರಿ ಅಥವಾ ಅಂಟುರೋಗದಿಂದ ನರಳುತ್ತಿರುವ, ಯಾರೇ ವ್ಯಕ್ತಿಯು ಮಾರುಕಟ್ಟೆಗೆ ಪ್ರವೇಶಿಸುವುದನ್ನು, ಮಾರುಕಟ್ಟೆಯ ಪ್ರಭಾರದಲ್ಲಿರುವ ವ್ಯಕ್ತಿಯು ತಡೆಯತಕ್ಕದ್ದು ಮತ್ತು ಅಲ್ಲಿಂದ ಅವನನ್ನು ಹೊರದೂಡತಕ್ಕದ್ದು; ಮತ್ತು ಅಲ್ಲಿ ಗಲಭೆ ಎಬ್ಬಿಸುವ ಯಾರೇ ವ್ಯಕ್ತಿಯನ್ನು ಅಲ್ಲಿಂದ ಹೊರದೂಡಬಹುದು.''

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸಿವಿಲ್ ರಿಟ್ ಅರ್ಜಿ ಸಂಖ್ಯೆ 1151/2017 (ಪಿಐಎಲ್-ಡಬ್ಲ್ಯು) ಇದರಲ್ಲಿ ಭಾರತದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನಕ್ಕೆ ಅನುಸಾರವಾಗಿ, ಕುಷ್ಠರೋಗವು ಗುಣಪಡಿಸಬಹುದಾದ ಖಾಯಿಲೆಯಾಗಿದ್ದು ಅದರಿಂದ ನರಳುತ್ತಿರುವ ವ್ಯಕ್ತಿಗಳ ವಿರುದ್ಧ ತಾರತಮ್ಯವನ್ನು ತೊಡೆದು ಹಾಕಲು, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎನ್. ನಾಗರಾಜ**
ಪೌರಾಡಳಿತ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



## ಅನುಬಂಧ
## ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 22)
## ಉದ್ಧೃತ ಭಾಗ

Xx xx xx

**245. ಕುಷ್ಠರೋಗಿಗಳು ಮತ್ತು ಗಲಭೆಕೋರರು ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಲು ಅಧಿಕಾರ.-** ಮಾರುಕಟ್ಟೆಯ ಪ್ರಭಾರದಲ್ಲಿರುವ ವ್ಯಕ್ತಿಯು ವ್ರಣಗಳು ಪ್ರಾರಂಭವಾಗಿರುವ ಕುಷ್ಠರೋಗದಿಂದ ಅಥವಾ ಯಾವುದೇ ಅಪಾಯಕಾರಿ ರೋಗದಿಂದ ನರಳುತ್ತಿದ್ದು ಅದರಲ್ಲಿ ಯಾವುದೇ ವಸ್ತುವನ್ನು ಮಾರುವ ಅಥವಾ ಮಾರಾಟಕ್ಕೆ ತೆರೆದಿಟ್ಟಿರುವ ಅಥವಾ ಅದರಲ್ಲಿ ಮಾರಾಟಕ್ಕಾಗಿ ಯಾವುದೇ ವಸ್ತುವನ್ನು ಕೊಂಡಿರದೇ ಅದನ್ನು ಮುಟ್ಟಿ ನೋಡುವ ಯಾರೇ ವ್ಯಕ್ತಿಯು ಮಾರುಕಟ್ಟೆಗೆ ಪ್ರವೇಶಿಸುವುದನ್ನು ತಡೆಯತಕ್ಕದ್ದು ಮತ್ತು ಅಲ್ಲಿಂದ ಅವನನ್ನು ಹೊರದೂಡತಕ್ಕದ್ದು; ಮತ್ತು ಅಲ್ಲಿ ಗಲಭೆ ಎಬ್ಬಿಸುವ ಯಾರೇ ವ್ಯಕ್ತಿಯನ್ನು ಅಲ್ಲಿಂದ ಹೊರದೂಡಬಹುದು.

Xx xx xx

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು